ಓಎಸ್ 09/2023

ಪಿಡಬ್ಲ್ಯೂ 2

ದಿ: **14.02.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು: ಶ್ರೀ ಜೆ.ಪಿ. ವಕೀಲರಿಂದ**

ನಾನು ಹಿಂದೆ ಸೀಮೆ ಎಣ್ಣೆ ಹಾಕುವ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು 25 ವರ್ಷಗಳ ಕಾಲ ಸೀಮೆ ಎಣ್ಣೆ ಹಾಕುವ ಕೆಲಸ ಮಾಡಿದ್ದೇನೆ. ಗುಂಡ್ಲುಪೇಟೆ ಟೌನ್ ದಿಂದ ಮಾಡ್ರಹಳ್ಳಿ ಗ್ರಾಮಕ್ಕೆ 4 ಕಿ.ಮೀ ಆಗುತ್ತದೆ. ಮಾಡ್ರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೇ ನಂಬರ್ 327 ಮತ್ತು 336 ಗೊತ್ತು. ಸಾಕ್ಷಿ ಮುಂದುವರೆದು ನಮ್ಮ ಜಮೀನ ಆ ಕಡೆ ಇದೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿನ ಸರ್ವೇ ನಂಬರ್ 271 ಇರಬಹುದು ಎಂದು ನುಡಿಯುತ್ತಾರೆ. ಈ ಬಗ್ಗೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಮಗೆ ಸೇರಿದ ಜಮೀನನ್ನು ನಮ್ಮ ತಂದೆಯವರೇ ಮಾರಾಟ ಮಾಡಿರುತ್ತಾರೆ. ಆಗ ನನಗೆ 10-12 ವರ್ಷ ವಯಸ್ಸು ಆಗಿತ್ತು. ನಮ್ಮ ತಂದೆ ಜಮೀನನ್ನು ಕೊಟ್ಟ ನಂತರ ನಾನು ಆ ಕಡೆ ಹೋಗಿಲ್ಲ ಎಂದರೆ ಸರಿ. ನಾನು 50-60 ವರ್ಷಗಳಿಂದ ಹೋಗಿಲ್ಲ ಎಂದರೆ ಸಾಕ್ಷಿಯ ನಾನು ಯಾಕೆ ಆ ಕಡೆ ಹೋಗಬೇಕು ಎಂದು ನುಡಿಯುತ್ತಾರೆ. ನಾನು ವಾದಿಯರಿಗೆ ಸೇರಿದ ಎನ್ನಲಾದ ಜಮೀನನ್ನು ನೋಡಿ 40 ವರ್ಷ ಆಗಿದೆ.

ನಾನು ಗೋಪಾಲಚಾರಿಗೆ ನೋಡಿದ್ದೇನೆ, ಅವರ ಜಮೀನನ್ನು ಸರಿಯಾಗಿ ನೋಡಿಲ್ಲ. ಗೋಪಾಲಚಾರಿಗೆ ಸಂಬಂಧಿಸಿದ ದಾಖಲಾತಿ ನೋಡಿದ್ದೇನೆ ಆದರೆ ನನಗೆ ಓದಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಸರ್ಕಾರದಿಂದ ಬಂದಿರುತ್ತದೆ ಎಂದು ಹೇಳುತ್ತಿದ್ದರು. ಯಾವಾಗ ಸರ್ಕಾರದಿಂದ ಬಂತು ಎಂದು ಹೇಳಿದ್ದಾರಾ ಎಂದರೆ, ಸಾಕ್ಷಿಯು ಹೇಳಿಲ್ಲ ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಬಂತು ಎಂಬುದನ್ನು ಸಹ ಹೇಳಿಲ್ಲ. ಸರ್ಕಾರದಿಂದ ಯಾವ ಇಸವಿಯಲ್ಲಿ ಮಂಜೂರು ಆಗಿತ್ತು ಎಂಬುದು ನನಗೆ ಗೊತ್ತಿಲ್ಲ. ಅವರ ಹೆಸರಿಗೆ ಆಗಿರುವ ಕಾಗದ ಪತ್ರಗಳನ್ನು ನನಗೆ ತೋರಿಸುತ್ತಿದ್ದರು, ನನಗೆ ತೋರಿಸಿ 40 ವರ್ಷಗಳು ಆಗಿದೆ. ಇತ್ತೀಚೆಗೆ ನಾನು ಯಾವುದೇ ಕಾಗದ ಪತ್ರಗಳನ್ನು ನೋಡಿಲ್ಲ. ನನಗೆ ಗೋಪಾಲಚಾರಿಯ ಜಮೀನಿನ ಚೆಕ್ಕುಬಂದಿ ಗೊತ್ತು. ಚೆಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ಜಾಗ, ಪಶ್ಚಿಮಕ್ಕೆ ಹಳ್ಳ, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಸರ್ಕಾರಿ ಟಾರ್ ರಸ್ತೆ ಇರುತ್ತದೆ. ನಾನು ಈಗ ಯಾವ ಸರ್ವೇ ನಂಬರ್ ಚೆಕ್ಕುಬಂದಿ ಹೇಳಿದ್ದೇನೆ ನನಗೆ ಗೊತ್ತಿಲ್ಲ. ಗೋಪಾಲಚಾರಿ ಮತ್ತು ನಮ್ಮ ತಂದೆ ವಿಶ್ವಾಸದಿಂದ ಇದ್ದರು. ಗೋಪಾಲಚಾರಿಯವರ ಮಕ್ಕಳೊಂದಿಗೆ ನಾನು ಚೆನ್ನಾಗಿದ್ದೇನೆ. ದಾವ ಆಸ್ತಿಯಲ್ಲಿ ಗೋಪಾಲಚಾರಿಯವರು ವ್ಯವಸಾಯ ಮಾಡುತ್ತಿದ್ದರು ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ನಾಗರಾಜಚಾರಿಯವರ ಮಕ್ಕಳು ಸಹ ನೋಡಿಕೊಳ್ಳುತ್ತಿದ್ದರು ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಓಎಸ್ 09/2023

ಪಿಡಬ್ಲ್ಯೂ 2

ದಾವ ಆಸ್ತಿಗಳು ತೀಮ್ಮಾಚಾರಿರವರ ಮಕ್ಕಳಾದ ಪ್ರತಿವಾದಿ 1 ರಿಂದ 3 ರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ಗೋಪಾಲಚಾರಿಯವರು ಆಗಲಿ ಅಥವಾ ಅವರ ಕುಟುಂಬದವರಾಗಲಿ ಸ್ವಾಧೀನದಲ್ಲಿ ಇದ್ದಾರೆ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿರುವ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನನ್ನು ಸಾಕ್ಷಿಗೆ ಬರಲು 1ನೇ ವಾದಿ ಕೇಳಿರುತ್ತಾರೆ. ನಾಗರಾಜಚಾರಿ ಬರೆಸಿದ್ದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ದಾವ ಸ್ವತ್ತಿನ ವಿಚಾರ ಗೊತ್ತಿಲ್ಲದೆ ಇದ್ದರೂ ಸಹ ವಾದಿಗಳ ಪರವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪ್ರಮಾಣ ಪತ್ರಿಕೆಯನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ತಿಮ್ಮಾಚಾರಿಯವರ ಮಕ್ಕಳಾದ ಪ್ರತಿವಾದಿ 1 ರಿಂದ 3 ರವರನ್ನು ನಾನು ನೋಡಿಲ್ಲ. ತಿಮ್ಮಾಚಾರಿಯವರ ಮಕ್ಕಳ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆಸಿದ್ದಿರಾ ಎಂದರೆ ಸಾಕ್ಷಿಯು ತಿಮ್ಮಾಚಾರಿಯವರು ಯಾರು ಎಂದು ಗೊತ್ತಿಲ್ಲ, ಸುಳ್ಳು ಎಂದು ನುಡಿಯುತ್ತಾರೆ. ತಿಮ್ಮಾಚಾರಿಯವರ ಮಕ್ಕಳು ಯಾರು ಎಂದು ನನಗೆ ಗೊತ್ತಿಲ್ಲ.

ನನಗೆ ಈ ಕೇಸಿನ ಬಗ್ಗೆ ಗೊತ್ತಿಲ್ಲದೇ ಇದ್ದರೂ ಸಹ ನಾನು ನ್ಯಾಯಾಲಯ ದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವ ಆಸ್ತಿಗಳ ಬಗ್ಗೆ ಗೊತ್ತಿಲ್ಲ ಮತ್ತು ಪಿತ್ರಾರ್ಜಿತ ಆಸ್ತಿ ಮತ್ತು ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಪಾಲಚಾರಿಯವರು ಮಂಜೂರಾದ ಆಸ್ತಿಯನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಗೋಪಾಲಚಾರಿಯವರು ಮೃತರಾದ ನಂತರ ದಾವ ಆಸ್ತಿಗಳನ್ನು ವಾದಿಗಳು ಖಾತೆ ಮಾಡಿಸಿಕೊಂಡು ವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಗೋಪಾಲಚಾರಿಯವರಿಗಾಗಲಿ ಅವರ ಮಕ್ಕಳಿಗಾಗಲಿ ದಾವ ಆಸ್ತಿಗಳ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ